ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ **03.02.2024** ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **4** ರಿಂದ **8** ನೇ ಪ್ರತಿವಾದಿಗಳ ಪರ ವಕೀಲರಾದಃ ಶ್ರೀ ಜೆ.ಪಿ ರವರಿಂದ

ಸರ್ವೆ ನಂಬರ್ 193/2 ರ ಒಟ್ಟು ವಿಸ್ತೀರ್ಣ 3 ಎಕರೆ 08 ಗುಂಟೆ. ಪೊಲೀಸ್ ಬಸಪ್ಪ ರವರಿಗೆ ಈ ಆಸ್ತಿಯಲ್ಲಿ 36 ಗುಂಟೆ ಭಾಗ ಬಂದಿರುತ್ತದೆ. ಸರ್ವೆ ನಂಬರ್ 193/2 ರಲ್ಲಿ ಪೊಲೀಸ್ ಬಸಪ್ಪರವರಿಗೆ 1 ಎಕರೆ 26 ಗುಂಟೆ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪರವರ ಮಗ ಎನ್ ಬಿ ಶಿವಣ್ಣ ರವರು ಭೋಗ್ಯ ತೀರುವಳಿಯನ್ನು ಮಾಡಿಕೊಂಡ ನಂತರ ಅವರಿಗೆ ಸರ್ವೆ ನಂಬರ್ 193/2 ರಲ್ಲಿ 1 ಎಕರೆ 26 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪರವರು ತಾವು ಪೊಲೀಸ್ ಕೆಲಸ ಮಾಡುತ್ತಿದ್ದಾಗ ಮೈಸೂರಿನಲ್ಲಿ ಕೆಲವೊಮ್ಮೆ ಹಾಗೂ ಕೆಲವೊಮ್ಮೆ ಆಲ್ದೂರಿನಲ್ಲಿ ಇರುತ್ತಿದ್ದರು. ಪೊಲೀಸ್ ಬಸಪ್ಪರವರು ಪೊಲೀಸ್ ಕೆಲಸ ಮಾಡುತ್ತಿದ್ದಾಗ ಅವರು ಸಂಪೂರ್ಣವಾಗಿ ಮೈಸೂರಿನಲ್ಲೇ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪ ತಮ್ಮ ಹೆಂಡತಿ ಪುಟ್ಟಮ್ಮ ಮತ್ತು ತಮ್ಮ ಮಗ ಎನ್ ಬಿ ಶಿವಣ್ಣ ರವರ ಜೊತೆ ಮೈಸೂರಿನ ವಿದ್ಯಾರಣ್ಯಪುರಂ ನಲ್ಲಿ ನಿವೃತ್ತಿ ಆಗುವವರೆಗೂ ವಾಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಪುಟ್ಟಮ್ಮ ಪೊಲೀಸ್ ಬಸಪ್ಪರವರ ಹೆಂಡತಿ ಅಲ್ಲ ಹಾಗೂ ಎನ್ ಬಿ ಶಿವಣ್ಣ ಪೊಲೀಸ್ ಬಸಪ್ಪರವರ ಮಗ ಅಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪ ರವರ ರುದ್ರಮ್ಮ ರವರನ್ನು ಮದುವೆಯಾಗಿರುತ್ತಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ಪೊಲೀಸ್ ಬಸಪ್ಪ ರವರು ಹಿಂದೂ ಸಂಪ್ರದಾಯದಂತೆ ರುದ್ರಮ್ಮ ರವರನ್ನು ಎಂದಿಗೂ ಸಹಾ ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. ಪ್ರಭುಸ್ವಾಮಿರವರು ಪೊಲೀಸ್ ಬಸಪ್ಪ ಮತ್ತು ರುದ್ರಮ್ಮ ರವರ ಮಗ ಅಲ್ಲ ಎಂದರೆ ಸರಿಯಲ್ಲ. ಎನ್ ಬಿ .ಶಿವಣ್ಣರವರು ಪೊಲೀಸ್ ಬಸಪ್ಪ ರವರ ಒಬ್ಬನೇ ಮಗ ಎಂದರೆ ಸರಿಯಲ್ಲ.

ಪೊಲೀಸ್ ಬಸಪ್ಪರವರು ದಿನಾಂಕ 02.10.1968 ರಂದು ಮೃತಪಟ್ಟಿರುತ್ತಾರೆ. ಪೊಲೀಸ್ ಬಸಪ್ಪರವರು 02.10.1968 ರಂದು ಮೃತಪಟ್ಟಿರುತ್ತಾರೆ ಎಂದು ತೋರಿಸಲು

ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ತಮ್ಮ ಬಳಿ ಯಾವುದೇ ದಾಖಲಾತಿಗಳು ಇಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪ ರವರು ಮೈಸೂರಿನಲ್ಲಿ ತೀರಿಕೊಂಡಿರುತ್ತಾರೆ ಎಂದು ಜನರು ಹೇಳುತ್ತಾರೆ ಆದರೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಪೊಲೀಸ್ ಬಸಪ್ಪ ರವರು ತೀರಿಕೊಂಡಾಗ ಪುಟ್ಟಮ್ಮ ರವರು ಬದುಕಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಪೊಲೀಸ್ ಬಸಪ್ಪ ರವರ ಮರಣ ನಂತರ ಪಿಂಚಣಿಯನ್ನು ಪುಟ್ಟಮ್ಮ ರವರು ತೆಗೆದುಕೊಳ್ಳುತ್ತಿದ್ದರು ಎಂದರೆ ನಿಜ ಸಾಕ್ಷಿಯು ಮುಂದುವರಿದು ಮೋಸದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಪುಟ್ಟಮ್ಮ ರವರು ಪಿಂಚಣಿಯನ್ನು ತೆಗೆದುಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

ನನ್ನ ತಂದೆ ಪ್ರಭುಸ್ವಾಮಿರವರು ಆಲ್ದೂರಿನಲ್ಲಿ ಮತ್ತು ಮೈಸೂರಿನಲ್ಲಿ ವಾಸ ಮಾಡುತ್ತಿದ್ದರು. ನನ್ನ ತಂದೆ ಪ್ರಭುಸ್ವಾಮಿರವರು ಮೈಸೂರಿನಲ್ಲಿ ರಾಮರೆಡ್ಡಿ ಎಂಬುವವರ ಕೆಳಗೆ ಕೂಲಿ ಕೆಲಸ ಮಾಡುತ್ತಿದ್ದರು. ಸ್ವಲ್ಪ ದಿನಗಳ ಕಾಲ ಮೈಸೂರಿನ ಜಯಲಕ್ಷ್ಮಿಪುರಂನಲ್ಲಿದ ಸ್ವಲ್ಪ ದಿನಗಳ ಕಾಲ ಮೈಸೂರಿನ ಹಿನಕಲ್ ನಲ್ಲಿ ಹಾಗೂ ಸ್ವಲ್ಪ ದಿನಗಳ ಕಾಲ ಮೈಸೂರಿನ ಸೋಳ್ಳೆಪುರದಲ್ಲಿ ನನ್ನ ತಂದೆ ಪ್ರಭುಸ್ವಾಮಿ ರವರು ವಾಸ ಮಾಡುತ್ತಿದ್ದರು. ನನ್ನ ತಂದೆ ಪ್ರಭುಸ್ವಾಮಿ ರವರು ಆಲ್ದೂರು ಗ್ರಾಮದ ಬೇರೆ ಬಸಪ್ಪರವರ ಮಗ ಆದರೆ ಪೊಲೀಸ್ ಬಸಪ್ಪರವರ ಮಗ ಅಲ್ಲ ಎಂದು ಸೂಚಿಸಿದರೆ ಸರಿಯಲ್ಲ.

ಪೊಲೀಸ್ ಬಸಪ್ಪ ರವರು ತಮ್ಮ ತಮ್ಮ ಸಿದ್ದರಾಜಪ್ಪ ರವರಿಗೆ 1943 ರಲ್ಲಿ ಭೋಗ್ಯ ಮಾಡಿದ್ದ ವಿಷಯವು ನನ್ನ ತಂದೆ ಪ್ರಭುಸ್ವಾಮಿ ರವರಿಗೆ 1970 ನೇ ಸಾಲಿನ ನಂತರ ಗೊತ್ತಾಗಿರುತ್ತದೆ. ನನ್ನ ತಂದೆಗೆ ಆರ್ಥಿಕವಾಗಿ ಶಕ್ತಿ ಇದ್ದಿಲ್ಲದ ಕಾರಣ ಹಾಗೂ ಸಾಕಷ್ಟು ತಿಳುವಳಿಕೆ ಇಲ್ಲದ ಕಾರಣ ಈದಾವೆಯನ್ನು 2008 ನೇ ಸಾಲಿನವರೆಗೂ ಹೂಡಿರುವುದಿಲ್ಲ.

ನನ್ನ ತಂದೆ ಪ್ರಭುಸ್ವಾಮಿ ರಾಮರೆಡ್ಡಿರವರ ಕೂಲಿ ಕೆಲಸ ಮಾಡಲು ಹೋಗುತ್ತಿದ್ದಾಗ ಅವರ ದಿನದ ಆದಾಯ ರೂ.20/- ಇತ್ತು. ನನ್ನ ತಂದೆಯು 1995 ರಿಂದ 2010 ನೇ ಸಾಲಿನ ಸಮಯದಲ್ಲಿ ವರ್ಷಕ್ಕೆ ರೂ.5,000/- ರೂ.ಗಳನ್ನು ಸಂಪಾದನೆ ಮಾಡುತ್ತಿದ್ದರು. ಆ ಸಮಯದಲ್ಲಿ ನನ್ನ ತಂದೆ ಇನ್ನೂ ಹೆಚ್ಚು ಸಂಪಾದನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1990 ನೇ ಸಾಲಿನಿಂದ 2010 ನೇಸಾಲಿನವರೆಗೂ ನಾವು ಮನೆ ಬಾಡಿಗೆಯಾಗಿ ಕೇವಲ 100-00 ರೂ.ಗಳನ್ನು ಬಾಡಿಗೆಯಾಗಿ ನೀಡುತ್ತಿದ್ದೆವು ಸಾಕ್ಷಿಯು ಮುಂದುವರಿದು ನಮ್ಮ ತಂದೆಯು ವಾಚ್ಮನ್ ಆಗಿ ಸಹಾ ಜೊತೆಗೆ ಕೆಲಸ ಮಾಡಿ 100-00 ರೂ. ಬಾಡಿಗೆಯನ್ನು ನೀಡುತ್ತಿದ್ದರು ಎಂದು ನುಡಿಯುತ್ತಾರೆ. 1995 ನೇ ಸಾಲಿನಿಂದ ದಿನದ ಕೂಲಿಯೇ

100-00 ರೂ.ಗಳು ಇತ್ತು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು 60 ರಿಂದ 80 ರೂ.ಗಳು ಇತ್ತು ಎಂದು ನುಡಿಯುತ್ತಾರೆ. ನನ್ನ ತಂದೆಯು ಊರಿನ ಮುಖಂಡರ ಸಮಕ್ಷಮ ಭೋಗ್ಯ ಬಿಡುಗಡೆಯ ವಿಚಾರವನ್ನು ಪ್ರಸ್ತಾಪಿಸಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ. 1970 ನೇ ಸಾಲಿನ ನಂತರ ಭೋಗ್ಯ ಬಿಡುಗಡೆ ಮಾಡಿಸಿಕೊಳ್ಳಲು ಸಿದ್ದರಾಜಪ್ಪ ನವರಿಗಾಗಲೀ ಅಥವಾ ಅವರ ಮಕ್ಕಳಿಗಾಗಲೀ ನೋಟಿಸ್ ಕೊಟ್ಟಿರುವುದಿಲ್ಲ. 1971 ನೇ ಸಾಲಿನಲ್ಲಿ ಪೊಲೀಸ್ ಬಸಪ್ಪರವರ ಮಗ ಎನ್ ಬಿ ಶಿವಣ್ಣನವರು ಒಂದನೇ ಪ್ರತಿವಾದಿ ಹಾಗೂ ಆತನ ತಾಯಿ ಸುಬ್ಬಮ್ಮ ರವರಿಂದ ಭೋಗ್ಯ ತೀರುವಳಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1943 ರ ಅಸಲು ಭೋಗ್ಯ ಪತ್ರ ಉಪ ನೋಂದಾಣಾಧಿಕಾರಿಗಳ ಕಛೇರಿಯಲ್ಲಿದೆ. 4 ಅಂಕಣದ ಮೇಲ್ಛಾವಣಿ ಇಲ್ಲದ ಒಂದು ಮನೆ, ಒಂದು ಖಾಲಿ ಜಾಗ, 36 ಗುಂಟೆ ಜಮೀನು ಮತ್ತು 1 ಎಕರೆ 2 ಗುಂಟೆ ಜಮೀನುಗಳನ್ನು ಭೋಗ್ಯ ಮಾಡಲಾಗಿತ್ತು. ಎಲ್ಲಾ ಆಸ್ತಿಗಳನ್ನು ಸೇರಿಸಿ ನನ್ನ ತಂದೆಯು ಈ ದಾವೆಯನ್ನು ಹೂಡಿರುತ್ತಾರೆ. ಸಾಕ್ಷಿಯು ಮುಂದುವರಿದು ಐಟಂ ನಂಬರ್ 1 ರ ಸಲುವಾಗಿ ಮಾನ್ಯ ನಂಜನಗೂಡಿನ ನ್ಯಾಯಾಲಯದಲ್ಲಿ ಸಹಾ ದಾವೆಯನ್ನು ಹೂಡಿರುವುದಾಗಿ ನುಡಿಯುತ್ತಾರೆ. ಅದು ನಂಜನಗೂಡಿನ ಯಾವ ನ್ಯಾಯಾಲಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯುು ತಹಸೀಲ್ದಾ ರ್ ರವರ ನ್ಯಾಯಾಲಯ ಎಂದು ನುಡಿಯುತ್ತಾರೆ. ತಹಸೀಲ್ದಾ ರ್ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುವುದು 2008-09 ನೇ ಸಾಲಿನಲ್ಲಿ.

(ಈ ಹಂತದಲ್ಲಿ ಪ್ರತಿವಾದಿ ನಂ 4 ರಿಂದ 8 ರವರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಆಲಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

03.02.2024.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.